## ಬ್ರಹ್ಮಾಂಡ

ವೇದಾಂತದ ಸತ್ಯವನ್ನು ಈ ಮೂರು ವಾಕ್ಯಗಳಲ್ಲಿ ವಿವರಿಸಬಹುದು. ಅದೇ, **"**ಬ್ರಹ್ಮಸತ್ಯ; ಜಗತ್ತು ಮಿಥ್ಯ. ಜೀವ ಬ್ರಹ್ಮನಲ್ಲದೇ ಬೇರಲ್ಲ. ಸರ್ವವೂ ಬ್ರಹ್ಮಮಯ.**"** ಮೊದಲನೆಯದು ಬ್ರಹ್ಮ ಒಂದೇ ಸತ್ಯ ಮತ್ತು ಜಗತ್ತು ಮಿಥ್ಯ ಎಂಬುದು. ಸತ್ಯ ಎಂದರೆ ಏನು ಎಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಸತ್ಯ ಎಂದರೆ ಯಾವುದು ಯಾವಾಗಲೂ ಇರುವುದೋ, ಎಂದಿಗೂ ಬದಲಾಯಿಸುವುದಿಲ್ಲವೋ ಅದು. ಆ ದೃಷ್ಟಿಯಿಂದ ನೋಡಿದರೆ, ನಾವು ಇರುವ ಜಗತ್ತು ಈಗ ಇರುವಂತೆ ಕಂಡರೂ, ಇದು ಒಂದೇ ಸಮನಾಗಿಲ್ಲ, ಯಾವಾಗಲೂ ಬದಲಾಯಿಸುತ್ತಿರುವುದು. ದೇಶ, ಕಾಲ, ನಿಮಿತ್ತದ ಒಳಗಿರುವ ಪ್ರತಿಯೊಂದು ವಸ್ತುವೂ ಬದಲಾಗುತ್ತಿರಬೇಕು. ಅದು ಈಗ ಇರುವುದಕ್ಕೆ ಮುಂಚೆ ಇರಲಿಲ್ಲ. ನಾಶವಾದ ಮೇಲೆ ಇರುವುದಿಲ್ಲ. ಬದಲಾಗುತ್ತಿರುವಾಗ, ಆಗ ಆ ಬದಲಾವಣೆಗಳ ಹಿಂದೆ ಯಾವುದು ಇದೆಯೋ ಅದು ಮಾತ್ರ ಸತ್ಯ. ಈ ದೃಷ್ಟಿಯಿಂದ ನೋಡಿದರೆ ಜಗತ್ತು ಸತ್ಯವಾಗಿಲ್ಲ. ಏಕೆಂದರೆ ಇದು ಹಿಂದೆ ಇರಲಿಲ್ಲ, ಕೆಲವು ಕೋಟಿ ವರ್ಷಗಳಾದ ಮೇಲೆ ಇರುವುದಿಲ್ಲ. ಈಗಲಾದರೂ ಇದೆಯಲ್ಲ ಎಂದರೆ ಇದು ಬದಲಾವಣೆಯ ಸಂತೆ. ಈ ಬದಲಾವಣೆಯ ಹಿಂದೆ ಯಾವುದೋ ಬದಲಾಯಿಸದೆ ಇರುವುದು ಇದೆ. ಅದೇ ಸತ್ಯ, ಅದನ್ನೇ ನಾವು **ಬ್ರಹ್ಮ** ಎಂದು ಕರೆಯುವುದು. ಈ ಪ್ರಪಂಚದಲ್ಲಿ ಈಗ ಎರಡು ಸತ್ಯವಾಗಿರುವಂತೆ ಕಾಣುವುದು. ಅದೇ ಬ್ರಹ್ಮ ಮತ್ತು ಜಗತ್ತು. ಆದರೆ ಜಗತ್ತು ತನಗೆ ತಾನೆ ಇರಲಾರದು. ಅದು ಇರಬೇಕಾದರೆ ಮತ್ತೊಂದರ ಆಶ್ರಯ ಬೇಕು. ಆ ಮತ್ತೊಂದೇ ಅದರ **ದೃಕ್**, ಅಂದರೆ ಅದನ್ನು ಸಾಕ್ಷಿಯಂತೆ ನೋಡುವವನು. ಇನ್ನು ಮೇಲೆ ಆ ನೋಡುವವನನ್ನೇ ತೆಗೆದುಕೊಳ್ಳೋಣ.

## ಪಿಂಡಾಂಡ

ಈ ಪ್ರಪಂಚದಲ್ಲೆಲ್ಲ ನನಗೆ ಅತ್ಯಂತ ಮುಖ್ಯವಾಗಿರುವುದು 'ನಾನು' ಎಂಬ ಪ್ರತ್ಯಯ. ಮೊದಲು ನಾನು ಇದ್ದೇನೆ. ಅನಂತರ ನಾನು ನೋಡುವ ಜಗತ್ತು ಇದೆ. ನಾನು ಇಲ್ಲದೇ ಇದ್ದರೆ ನನ್ನ ಪಾಲಿಗೆ ಜಗತ್ತೇ ಇಲ್ಲ. ಇನ್ನಾರಿಗೋ ಇರಬಹುದು. ಆದರೆ ನನಗೆ ಅದರ ಅರಿವೇ ಇರುವುದಿಲ್ಲ. ಈ 'ನಾನು' ಎಂಬುದು ಯಾವುದು ಎಂಬುದನ್ನು ತಿಳಿದುಕೊಳ್ಳೋಣ. ಈ ಪ್ರಪಂಚದಲ್ಲಿ ನಾನಲ್ಲದೇ ಇರುವ ವಸ್ತುವನ್ನು ತಿಳಿದುಕೊಳ್ಳುವುದು ಸುಲಭ. ಆದರೆ ನಿಜವಾದ 'ನಾನು' ಎಂಬುದು ಅಷ್ಟು ಸುಲಭವಲ್ಲ. ಎಲ್ಲಿಯವರೆಗೆ ಅದನ್ನು ಪ್ರಶ್ನಿಸುವುದಕ್ಕೆ ಹೋಗುವುದಿಲ್ಲವೋ ಅಲ್ಲಿಯವರೆಗೆ ಅದು ಇದೆ. ಆದರೆ ಅದನ್ನು ಪ್ರಶ್ನಿಸುವುದಕ್ಕೆ ಹೋದ ಒಡನೆಯೇ ಅದು ಹಿಂದೆ ಹಿಂದೆ ಸರಿದು ಮಾಯವಾಗಿ, ಅದರ ಸ್ಥಳದಲ್ಲಿ ಬ್ರಹ್ಮ ನಿಂತಿರುವುದು ಕಾಣುವುದು. ಮೊದಲು ಅತ್ಯಂತ ಸ್ಥೂಲವಾದ ನನ್ನದೇ ಇಂದ್ರಿಯಗಳನ್ನು 'ನಾನು' ಎಂದು ತಿಳಿದುಕೊಳ್ಳುತ್ತೇನೆ. ನಾನು ಅದನ್ನು ಹೇಳುವಾಗಲೂ ನನ್ನ ಕೈ, ನನ್ನ ಕಾಲು, ನನ್ನ ಕಣ್ಣು ಎಂದು ಹೇಳುತ್ತೇನೆ. ನಾವು ಯಾವಾಗ ಹೀಗೆ ಹೇಳುವೆವೋ ಆಗಲೇ ಅದು ನಮ್ಮಿಂದ ಹೊರಗಿದೆ, ನಾವು ಅವುಗಳನ್ನು ಉಪಯೋಗಿಸುವವರು ಎಂಬುದು ಗೊತ್ತಾಗುವುದು. ನನ್ನ ಕೋಲು ಎಂದರೆ ನಾನು ಬೇರೆ, ಕೋಲು ಬೇರೆ ಹೇಗೋ ಹಾಗೆಯೇ ನಾನು ಮತ್ತು ದೇಹ, ಅದರ ಇಂದ್ರಿಯಗಳು ಕೂಡ. ಜೀವಾತ್ಮ ಇವನ್ನು ಉಪಯೋಗಿಸುತ್ತ ಇದ್ದಾನೆ. ಉಪಯೋಗಿಸುತ್ತ, ಉಪಯೋಗಿಸುತ್ತ ಅವುಗಳ ಮೇಲೆಲ್ಲ 'ನಾನು' ಎಂಬುದನ್ನು ಆರೋಪಿಸುತ್ತಾನೆ. ಇವು ಯಾವುವೂ ನಾನಲ್ಲ. ನನ್ನದು ಎಂದರೆ ನನ್ನಿಂದ ಬೇರೆ ಇರುವಂಥದ್ದು. ಇಂದ್ರಿಯಗಳ ಹಿಂದೆ ಸೂಕ್ಷ್ಮವಾಗಿರುವುದೇ ಮನಸ್ಸು, ಬುದ್ಧಿಗಳು. ಇವುಗಳ ವಿಷಯವನ್ನು ನಾವು ಮಾತನಾಡುವಾಗ ನಾವು ಬೇರೆ ಅವು ಬೇರೆ ಎಂಬ ಪ್ರಜ್ಞೆ ಇರುತ್ತದೆ. ಬುದ್ಧಿ ಎಂಬುದು ಒಂದು ಆಲೋಚನೆ ಮಾಡುವ ಯಂತ್ರ. ನಾನು ಅದನ್ನು ಉಪಯೋಗಿಸುತ್ತೇನೆ. ಕೆಲವು ವೇಳೆ ಬುದ್ಧಿ ಚೆನ್ನಾಗಿ ಕೆಲಸ ಮಾಡುವುದು, ಮತ್ತೆ ಕೆಲವು ವೇಳೆ ಬುದ್ಧಿ ಚೆನ್ನಾಗಿ ಕೆಲಸ ಮಾಡುವುದಿಲ್ಲ ಎನ್ನುತ್ತೇವೆ.

ಅದರ ಹಿಂದೆ ಇರುವುದೇ ಅಹಂಕಾರ, 'ನಾನು' ಎಂಬ ಪ್ರತ್ಯಯ. ಇದಕ್ಕೆ ಪ್ರಭೆ ಇರುವ ಹಾಗೆ ಕಾಣಿಸುವುದು. ಆದರೆ ಅದು ಹೇಗಿದೆ ಎಂದರೆ, ಬಲ್ಬು ಉರಿಯುತ್ತಿರುವಾಗ ಅದನ್ನು ನೋಡಿದರೆ, ಅದು ತನ್ನ ಯೋಗ್ಯತೆಯಿಂದಲೇ ಉರಿಯುತ್ತಿರುವ ಹಾಗೆ ಕಾಣುವುದು. ಆದರೆ ಅದರ ಹಿಂದೆ ಇರುವ ವಿದ್ಯುಚ್ಛಕ್ತಿ ನಿಲ್ಲಲಿ, ಗೊತ್ತಾಗುವುದು ಬಲ್ಬಿನ ಸ್ವಯಂಪ್ರಭೆಯ ಬಂಡವಾಳ. ಎಲ್ಲಾ ಬಲ್ಬಿನ ಹಿಂದೆಯೂ ಉರಿಯುವಂತೆ ಮಾಡುತ್ತಿರುವುದು ಒಂದೇ ವಿದ್ಯುಚ್ಛಕ್ತಿ. ಅದರಂತೆಯೇ ಎಲ್ಲಾ ಅಹಂಕಾರಗಳ ಹಿಂದೆ ಇರುವುದು ಒಂದೇ ಪರಬ್ರಹ್ಮ. ಈಗ ನಾವು ಭಾವಿಸುತ್ತೇವೆ, ಒಂದೇ ಬ್ರಹ್ಮ ಹಲವಾಗಿ, ಚೂರು ಚೂರಾಗಿ ನಮ್ಮಲ್ಲೆಲ್ಲ ಬಂದು ಸೇರಿಕೊಂಡಿರುವಂತೆ ಕಾಣುತ್ತಿದೆಯಲ್ಲ ಎಂದು. ಕೆಲವು ವೇಳೆ ಬೆಳಿಗ್ಗೆ ಹೊರಗೆ ಸಂಚಾರ ಹೊರಟಾಗ ನೆಲದ ಮೇಲಿರುವ ಹುಲ್ಲಿನ ಮೇಲೆ ಅನಂತ ಹಿಮಮಣಿಗಳನ್ನು ನೋಡುತ್ತೇವೆ. ಅದರಲ್ಲೆಲ್ಲಾ ಸೂರ್ಯ ಕಾಣುತ್ತಿರುವನು. ಸೂರ್ಯನ ಅಂಶವೇ ಚೂರುಚೂರಾಗಿ ಕೆಳಗೆ ಬಿದ್ದಿರುವಂತೆ ಕಾಣುವುದು. ಆದರೆ ನಿಜವಾಗಿ ಹಾಗೆ ಆಗಿದೆಯೆ? ಇಲ್ಲ, ಸೂರ್ಯ ಒಡೆದುಹೋಗಿಲ್ಲ. ಅವನ

ಅಂಶವೂ ಕೆಳಗೆ ಬಿದ್ದಿಲ್ಲ. ಹಿಮಮಣಿ ಮೇಲಿರುವ ಸೂರ್ಯನನ್ನು ಪ್ರತಿಬಿಂಬಿಸುತ್ತಿದೆ, ಅಷ್ಟೆ. ಹಲವು ಸೂರ್ಯರಿಲ್ಲ, ಹಲವು ಸೂರ್ಯರಿಗೆ ಕಾರಣನಾದ ಒಂದು ಸೂರ್ಯನಿರುವನು. ಇದರಂತೆಯೇ ಹಲವು ಜೀವಾತ್ಮರಿಗೆ ಕಾರಣನಾದ ಒಬ್ಬ ಪರಮಾತ್ಮನಿರುವನು. ನಾವು ಕೆಲವು ವೇಳೆ ಪರಮಾತ್ಮನೇ ಪೂರ್ಣ, ನಾವುಗಳೆಲ್ಲ ಅದರ ಅಂಶಗಳು ಎನ್ನುತ್ತೇವೆ. ಅನಂತಸಾಗರ ಪರಮಾತ್ಮ. ಅದರ ಮೇಲೆ ಅಲೆಗಳು ಇವೆ. ಅವುಗಳೆಲ್ಲ ಸಾಗರದ ಅಂಶ. ಹಾಗೆಯೇ ನಾವು ಏಕೆ ಇರಬಾರದು ಎಂದು ಪ್ರಶ್ನಿಸಬಹುದು. ನಾವು ಪರಮಾತ್ಮನನ್ನು ಪೂರ್ಣಾತ್ಮ ಎಂದರೆ, ಅದರಿಂದ ಬಂದ ಪ್ರತಿಯೊಂದೂ ಪೂರ್ಣವೇ ಆಗಿರಬೇಕು, ಪೂರ್ಣದ ಅಂಶ ಆಗುವುದಕ್ಕೆ ಆಗುವುದಿಲ್ಲ. ಪೂರ್ಣದಿಂದ ಪೂರ್ಣವೇ ಬರುವುದು. ಅದರಿಂದ ಅಲ್ಪಪೂರ್ಣ ಬಂದಿಲ್ಲ. ಒಂದು ವೇಳೆ ಅಲ್ಪಪೂರ್ಣ ಎಂದು ಹೇಳಿದರೂ ಅಲ್ಪಪೂರ್ಣಕ್ಕೂ ಮಹಾಪೂರ್ಣಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಣ್ಣ ಸೊನ್ನೆ ಮತ್ತೊಂದು ದೊಡ್ಡ ಸೊನ್ನೆ. ಬೆಲೆ ಎರಡಕ್ಕೂ ಒಂದೇ. ನಾವು ಯಾವಾಗ ಅದನ್ನು ತಿಳಿದುಕೊಳ್ಳುತ್ತಾ ಹೋಗುವೆವೊ ಕೊನೆಗೆ ನಾವೇ ಅದಾಗುತ್ತೇವೆ. ಅದಕ್ಕಾಗಿಯೇ ಶಾಸ್ತ್ರವು **'ಬ್ರಹ್ಮವಿದ್ ಬ್ರಹ್ಮೈವ ಭವತಿ'** ಎಂದು ಹೇಳುವುದು. ಅಂದರೆ ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗಿಬಿಡುತ್ತಾನೆ ಎಂದರ್ಥ. ಶ್ರೀರಾಮಕೃಷ್ಣರು ಕೊಡುವ ಉಪ್ಪಿನ ಬೊಂಬೆಯ ಉದಾಹರಣೆಯಂತಿದೆ ಇದು. ಉಪ್ಪಿನ ಬೊಂಬೆ ಸಮುದ್ರದ ಆಳ ಕಂಡುಹಿಡಿಯು ತ್ತೇನೆಂದು ಹೊರಟಿತು. ಸ್ವಲ್ಪದೂರ ಹೋಗುವುದರ ಒಳಗೆ ಅದರಲ್ಲಿ ಕರಗಿಹೋಯಿತು. ಅದರಂತೆಯೇ ಜೀವಿಗಳೂ ಅವನನ್ನು ತಿಳಿದುಕೊಳ್ಳುತ್ತಾ ಹೋದಂತೆಲ್ಲಾ ಅವನಲ್ಲಿಯೇ ಐಕ್ಯವಾಗುತ್ತಾ ಬರುವರು.

### ಪಾರಮಾರ್ಥಿಕ ದೃಷ್ಟಿ

ಅದ್ವೈತ ಹೊರಗಿನ ಪ್ರಪಂಚವನ್ನು ಅಲ್ಲಗಳೆಯು ವುದಿಲ್ಲ. ಜೀವಿಯನ್ನು ಹೇಗೆ ಅಲ್ಲಗಳೆಯುವುದಿಲ್ಲವೋ, ಅವನನ್ನೇ ಬ್ರಹ್ಮನ ಪಟ್ಟಕ್ಕೆ ಏರಿಸುವುದೊ, ಅದರಂತೆ ಹೊರಗಿನ ಜಗತ್ತನ್ನು ಕೂಡ ಅಲ್ಲಗಳೆಯುವುದಿಲ್ಲ.

ಬ್ರಹ್ಮನನ್ನು ಬಿಟ್ಟು, ಬ್ರಹ್ಮನಿಗೆ ಸರಿಸಮನಾಗಿ ಯಾವುದೋ ಒಂದು ಜಗತ್ತು ಇದೆ ಎಂದು ಅದು ಹೇಳುವುದಿಲ್ಲ. ಜಗತ್ತನ್ನು ಮಿಥ್ಯ ಎಂದರೂ ಯಾವುದನ್ನು ಮಿಥ್ಯ ಎನ್ನುವುದೋ, ಅದರ ಹಿಂದೆ ಬ್ರಹ್ಮನೇ ಇರುವನು. ಜಗತ್ತನ್ನು ಬ್ರಹ್ಮನ ಪಟ್ಟಕ್ಕೆ ಏರಿಸುವುದು ಅದ್ವೈತ. ಯಾವಾಗ ಒಬ್ಬ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುವನೋ ಆಗ ಅವನಿಗೆ ಎಲ್ಲವೂ ಬ್ರಹ್ಮವಾಗಿ ಕಾಣುವುದು. ಮುಂಚೆ ಅವನು ಸಾಧನಾ ಅವಸ್ಥೆಯಲ್ಲಿ ಜಗತ್ತನ್ನು ಬ್ರಹ್ಮನಿಂದ ಕಳೆಯುವನು. ಬ್ರಹ್ಮವನ್ನು ಅನುಭವಿಸಿ ಆದಮೇಲೆ, ಯಾವುದನ್ನು ಕಳೆದಿದ್ದನೋ ಅದನ್ನು ತೆಗೆದುಕೊಂಡು ನೋಡಿದರೆ, ಅದೂ ಬ್ರಹ್ಮವಾಗಿ ಕಾಣುವುದು. ಆಗ ಬ್ರಹ್ಮನಲ್ಲದೆ ಇರುವುದೇ ಪ್ರಪಂಚದಲ್ಲಿ ಇಲ್ಲ ಅನ್ನಿಸುವುದು. ನಾಮರೂಪದ ದೃಷ್ಟಿಯಿಂದ ನೋಡಿದಾಗ ಹಲವು ಕಾಣುವುದು. ನಾಮರೂಪವನ್ನು ಭೇದಿಸಿ ನೋಡಿದರೆ, ಒಂದೇ ಕಾಣುವುದು. ಜೇಡಿಮಣ್ಣಿನ ದೃಷ್ಟಿಯಿಂದ ನೋಡಿದಾಗ, ಎಲ್ಲಾ ಮಡಕೆ, ಕುಡಿಕೆಗಳಲ್ಲಿಯೂ ಒಂದೇ ಜೇಡಿಮಣ್ಣು ಇರುವುದು ಕಾಣುವುದು. ಆದರೆ ನಾಮ ರೂಪಗಳ ದೃಷ್ಟಿಯಿಂದ ನೋಡಿದಾಗ ಹಲವು ಇರುವಂತೆ ಕಾಣುವುದು. ವ್ಯಾವಹಾರಿಕ ದೃಷ್ಟಿಯಿಂದ ನೋಡಿದಾಗ, ಹಲವು ಸತ್ಯದಂತೆ ಕಾಣುವುದು. ಪಾರಮಾರ್ಥಿಕ ದೃಷ್ಟಿ ಯಿಂದ ಒಂದೇ. ಪಾರಮಾರ್ಥಿಕ ದೃಷ್ಟಿಯೇ ಮುಖ್ಯ. ಇದೇ ಎಲ್ಲಾ ತೋರಿಕೆಯ ಭಿನ್ನತೆಗಳನ್ನು ಅಳಿಸಿ ಬಿಡು ವುದು, ಮೂಲಕ್ಕೆ ಕರೆದುಕೊಂಡು ಹೋಗುವುದು.

ನಾವು ಅದ್ವೈತ ಶಿಖರದ ಅನುಭವಕ್ಕೆ ಹೋಗ ಬೇಕಾದರೆ ಸಾಧನೆ ಮಾಡಬೇಕು. ಇದು ಒಂದೇ ಸಲ ನಮಗೆ ಸಿದ್ಧಿಸಿಬಿಡುವುದಿಲ್ಲ. ಮಿಥ್ಯಾ ಪ್ರಪಂಚದಲ್ಲಿ ವಿಹರಿಸಿ ಮನಸ್ಸು ಬೇಕಾದಷ್ಟು ಸಂಸ್ಕಾರಗಳನ್ನು ಸಂಗ್ರಹಿಸಿದೆ. ಇವುಗಳಿಂದ ಮನಸ್ಸನ್ನು ಶುದ್ಧಮಾಡಿ ಕೊಳ್ಳ ಬೇಕು. ಯಾವಾಗ ಚಿತ್ತವು ಶುದ್ಧವಾಗುತ್ತಾ ಬರುವುದೋ ಅದು ಪಾರದರ್ಶಕವಾಗುತ್ತಾ ಬರುವುದು. ಕೊಳೆಯೆಲ್ಲ ಹೋದ ಮೇಲೆ, ನಮ್ಮ ಮನಸ್ಸೇ ಶುಭ್ರ ಕನ್ನಡಿಯಾದ ಮೇಲೆ, ಅದರ ಹಿಂದೆಯೇ ಬ್ರಹ್ಮ ಪ್ರಕಾಶಿಸುವನು. ಎಲ್ಲರ ನೈಜ ಸ್ವಭಾವವೇ ಇದು. ಆ ಸ್ಥಿತಿಯನ್ನು ಪಡೆಯುವುದು ನಮ್ಮ ಆಜನ್ಮಸಿದ್ಧ ಹಕ್ಕು. ನಾವು ಅಧಃಪಾತಾಳಕ್ಕೆ ಹೋಗಿ ದ್ದರೂ, ಬ್ರಹ್ಮನಲ್ಲಿರುವ **ಸತ್ ಚಿತ್ ಆನಂದ** ಹಾಳಾಗು ವುದಿಲ್ಲ. ಅದನ್ನು ಕಾಣದಂತೆ ಮಾಡಿಕೊಂಡಿರುವೆವು ಅಷ್ಟೇ. ಯಾವುದು ಸದಾ ಕಾಲದಲ್ಲಿಯೂ ಇತ್ತೊ, ಅದೇ ವ್ಯಕ್ತವಾಗುವುದು. ಇದೇ ಜ್ಞಾನಯೋಗದ ಗುರಿ.

(ಆಧಾರ : ಸ್ವಾಮಿ ವಿವೇಕಾನಂದ)


**ವಿವೇಕಪ್ರಭ ಪತ್ರಿಕೆಯ ಚಂದಾದಾರಿಕೆಯ ಸಂಬಂಧದ ಎಲ್ಲ ವಿಚಾರಣೆಗಳಿಗಾಗಿ ಕೆಳಗಿನ ಮೊಬೈಲ್ ಸಂಖ್ಯೆಗೆ ಕರೆ ಮಾಡಿ:**

**9481533505 (ಕೆ.ಪಿ. ವೇಣುಗೋಪಾಲ್)**

**ಸಮಯ:**

**ಬೆಳಗ್ಗೆ 10.30 ರಿಂದ ಸಂಜೆ 5.30ರವರೆಗೆ ಮಾತ್ರ**

**(ಭಾನುವಾರ ಮತ್ತು ರಜಾದಿನಗಳನ್ನು ಹೊರತುಪಡಿಸಿ)**

# ಸ್ವಾಮಿ ವಿವೇಕಾನಂದರ 'ಭಕ್ತಿಯೋಗ'

**ಭ**ಗವಂತನ ಸಾಕ್ಷಾತ್ಕಾರಕ್ಕಾಗಿ ಆಧ್ಯಾತ್ಮಿಕ ಸಾಧನೆ ಬೇಕು. ಅದಕ್ಕೆ ಅನುಸರಿಸಬೇಕಾದ ನಾಲ್ಕು ಯೋಗಗಳಲ್ಲಿ 'ಭಕ್ತಿಯೋಗ' ಅತ್ಯಂತ ಸುಲಭವಾದುದು. ಪ್ರತಿಯೊಬ್ಬನ ಹೃದಯದಲ್ಲಿಯೂ ಪ್ರೇಮವು ಸಹಜವಾಗಿಯೇ ಇರುತ್ತದೆ. ಅದನ್ನು ಭಗವಂತನ ಕಡೆಗೆ ತಿರುಗಿಸುವ ಪ್ರಯತ್ನವೇ ಇದು. **ಭಗವನ್ನಾಮ ಜಪ, ಸ್ಮರಣೆ, ಸಂಕೀರ್ತನೆ** – ಇವುಗಳನ್ನು ಒಳಗೊಂಡ ಭಕ್ತಿಯೋಗವೇ ಈ ಕಲಿಯುಗದಲ್ಲಿ ಮುಕ್ತಿಗೆ ಸುಲಭವಾದ ಮಾರ್ಗವೆಂದು ಶಾಸ್ತ್ರಗಳ ಅಭಿಪ್ರಾಯ. ಈ ಬಗ್ಗೆ ಧರ್ಮಗ್ರಂಥಗಳಲ್ಲಿ ಬಹಳ ವಿಚಾರಗಳು ಇವೆ. ಆದರೆ ಸ್ವಾಮಿ ವಿವೇಕಾನಂದರು ಬೋಧಿಸುವ ಭಕ್ತಿಯೋಗವು ಬಹಳ ವಿಶಿಷ್ಟವಾದುದು. ಅದರ ಬಗ್ಗೆ ಈಗ ತಿಳಿದುಕೊಳ್ಳೋಣ.



## ಭಕ್ತಿ ಎಂದರೇನು?

**ಯಾ ಪ್ರೀತಿರವಿವೇಕಿನಾಂ ವಿಷಯೇಷ್ವನಪಾಯಿನೀ ।**
**ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥**

*(ವಿಷ್ಣು ಪುರಾಣ, ೧–೨೦–೧೯)*

"ಅವಿವೇಕಿಗಳಿಗೆ ಕ್ಷಣಭಂಗುರವಾದ ಇಂದ್ರಿಯ ವಿಷಯಗಳ ಮೇಲೆ ಎಂತಹ ಅಚಲವಾದ ಪ್ರೀತಿ ಇರುವುದೋ, ಅಂತಹ ಪ್ರೀತಿಯು ನಿನ್ನನ್ನು ಸ್ಮರಿಸುವ ನನ್ನ ಹೃದಯದಿಂದ ಎಂದಿಗೂ ದೂರವಾಗದಿರಲಿ." ಭಕ್ತಿಯೋಗದ ಅತ್ಯುತ್ತಮವಾದ ವಿವರಣೆಯನ್ನು ಈ ಶ್ಲೋಕದಲ್ಲಿ ಕಾಣಬಹುದು. ಯಾವ ಪ್ರೀತಿಯನ್ನು ಮೊದಲು ವಿಷಯವಸ್ತುಗಳ ಮೇಲೆ ಹರಿಸಿದ್ದೆವೋ, ಅದೇ ಪ್ರೀತಿಯನ್ನು ಭಗವಂತನಿಗೆ ಕೊಟ್ಟರೆ ಅದು 'ಭಕ್ತಿ' ಎನಿಸುತ್ತದೆ. ಇದೇ ಈ ಶ್ಲೋಕದ ಅರ್ಥ.

## ಈಶ್ವರ ತತ್ತ್ವ

ಭಗವಂತನನ್ನು ಪ್ರೀತಿಸುವುದೇ ಭಕ್ತಿ. ಸಗುಣರೂಪಿ ಭಗವಂತನನ್ನು ಮಾತ್ರ ಪ್ರೀತಿಸಲು ಸಾಧ್ಯ. ಭಗವಂತನ ಸಗುಣರೂಪವನ್ನೇ 'ಈಶ್ವರ' ಎಂದು ಕರೆಯುತ್ತಾರೆ. **ಜನ್ಮಾದ್ಯಸ್ಯ ಯತಃ** – ಯಾರಿಂದ ಸೃಷ್ಟಿ, ಸ್ಥಿತಿ, ಪ್ರಳಯಗಳು ಉಂಟಾಗುತ್ತವೆಯೋ ಅವನೇ ಈಶ್ವರ ಎಂದು ಬ್ರಹ್ಮಸೂತ್ರವು ಹೇಳುತ್ತದೆ. ಅವನು ನಿತ್ಯನೂ, ಶುದ್ಧನೂ, ಮುಕ್ತನೂ, ಸರ್ವಜ್ಞನೂ, ದಯಾಮಯನೂ, ಗುರುಗಳಿಗೆ ಗುರುವೂ ಆಗಿರುತ್ತಾನೆ. **ಸ ಈಶ್ವರ ಅನಿರ್ವಚನೀಯ ಪ್ರೇಮಸ್ವರೂಪಃ** – ವಿವರಿಸಲು ಆಗದ ಪ್ರೇಮಸ್ವರೂಪನೇ ಈಶ್ವರ ಎಂದು ನಾರದರು ಹೇಳುತ್ತಾರೆ.

"ಸಚ್ಚಿದಾನಂದಸ್ವರೂಪನಾದ ನಿರ್ಗುಣ ಬ್ರಹ್ಮನೇ ಪರಮೇಶ್ವರನೂ ಕೂಡ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. "ಭಕ್ತನು ಆರಾಧಿಸುವ ಸಗುಣ ದೇವರು ಬ್ರಹ್ಮನಿಂದ ಬೇರೆ ಅಲ್ಲ ಎಂದು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು" ಎಂದು ಅವರು ಬೋಧಿಸುತ್ತಾರೆ. ಅವರ ಪ್ರಕಾರ, ಈಶ್ವರನು ನಿರ್ಗುಣಬ್ರಹ್ಮದ ಅತ್ಯಂತ ಶ್ರೇಷ್ಠ ಅಭಿವ್ಯಕ್ತಿ; ಮಾನವನು ನಿರುಪಾಧಿಕ ಸತ್ಯವನ್ನು ಮನಸ್ಸಿನ ಮೂಲಕ ಗ್ರಹಿಸಬಲ್ಲ ಶ್ರೇಷ್ಠ ಭಾವನೆಯೇ ಈಶ್ವರ.

**ಆಧ್ಯಾತ್ಮಿಕ ಸಾಧನೆಯಲ್ಲಿ ಮಾನವೀಯ ಪ್ರೇಮವು ಭಗವಂತನ ಕಡೆಗೆ ತಿರುಗುವ ಬಗೆಯನ್ನು ಹಂತಹಂತವಾಗಿ ಸ್ವಾಮಿ ವಿವೇಕಾನಂದರು ತಮ್ಮ 'ಭಕ್ತಿಯೋಗ'ದಲ್ಲಿ ವಿವರಿಸುತ್ತಾರೆ. ಅದಕ್ಕೆ ಸಹಾಯಕವಾದ ಆಹಾರವಿಧಾನ, ಪ್ರತೀಕ ಅವಲಂಬನ, ಉಪಾಸನೆ, ಇಷ್ಟನಿಷ್ಠೆ ಮುಂತಾದವನ್ನೂ ತಿಳಿಸಿಕೊಡುತ್ತಾರೆ. ಈ ವಿಷಯಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿರುವ ಸ್ವಾಮೀಜಿಯವರು ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆಸಲ್ಲಿಸುತ್ತಿದ್ದಾರೆ.**

## ಭಕ್ತಿಸಾಧನೆಗೆ ಸಹಾಯಕ ಅಂಶಗಳು

"ಆತ್ಮಸಾಕ್ಷಾತ್ಕಾರವೇ ಭಕ್ತಿಯ ಗುರಿ" ಎಂದು ಸ್ವಾಮಿ ವಿವೇಕಾನಂದರು ಪ್ರತಿಪಾದಿಸುತ್ತಾರೆ. ಅವರ ಪ್ರಕಾರ ಭಕ್ತಿಯೇ ಅತ್ಯುತ್ತಮ ಆದರ್ಶ; ಅದೇ ನಮ್ಮ ಜೀವನದ ಪರಮಧ್ಯೇಯ. ನಾವು ಈ ಗುರಿಯನ್ನು ಸೇರದೇ ಇದ್ದರೂ, ಅದರ ಸಮೀಪಕ್ಕಾದರೂ ಹೋಗುತ್ತೇವೆ; ಆದ್ದರಿಂದ ನಾವು ನಿಧಾನವಾಗಿ ಭಕ್ತಿಯ ಮೂಲಕ ದೇವರನ್ನು ಸೇರಲು ಪ್ರಯತ್ನಿಸಬೇಕು ಎಂದು ಅವರು ಹೇಳುತ್ತಾರೆ.

ಆಧ್ಯಾತ್ಮಿಕ ಜೀವನವನ್ನು ನಡೆಸಲು ಉತ್ತೇಜನ ನೀಡುವವನೇ ಗುರು. ಅದನ್ನು ಪಡೆದುಕೊಳ್ಳುವವನೇ ಶಿಷ್ಯ. ಇಂತಹ ಉತ್ತೇಜನವನ್ನು ಮತ್ತೊಂದು ಜೀವಿಗೆ ಕೊಡಬೇಕಾದರೆ ಮೊದಲು, ಕೊಡುವವನಿಗೆ ಆ ಯೋಗ್ಯತೆ ಇರಬೇಕು. ಎರಡನೆಯದಾಗಿ ಅದನ್ನು ಸ್ವೀಕರಿಸುವ ವ್ಯಕ್ತಿ ಯೋಗ್ಯನಾಗಿರಬೇಕು. ಶಿಷ್ಯನಲ್ಲಿ ಇರಬೇಕಾದ ಮುಖ್ಯಗುಣಗಳೆಂದರೆ, **ಪರಿಶುದ್ಧತೆ, ನಿಜವಾದ ಜ್ಞಾನಾಕಾಂಕ್ಷೆ** ಮತ್ತು **ದೃಢ ಪ್ರಯತ್ನ**. ಗುರುವಿಗೆ ಮೂರು ಗುಣಗಳು ಇರಬೇಕು. ಮೊದಲನೆಯದಾಗಿ ಅವನಿಗೆ ಶಾಸ್ತ್ರಗಳ ಸಾರ ಗೊತ್ತಿರಬೇಕು. ಎರಡನೆಯದಾಗಿ, ಅವನು ಪಾಪರಹಿತನಾಗಿರಬೇಕು. ಮೂರನೆಯದಾಗಿ, ಹಣ ಕೀರ್ತಿ ಯಶಸ್ಸು ಮುಂತಾದವನ್ನು ಗಳಿಸಬೇಕೆಂಬ ಯಾವ ಸ್ವಾರ್ಥಪ್ರೇರಿತ ಉದ್ದೇಶವೂ ಅವನಿಗೆ ಇರಬಾರದು.

ಸಾಧಾರಣ ಗುರುಗಳಿಗಿಂತ ಮೇಲ್ಮಟ್ಟದಲ್ಲಿ ಇರುವವರು ಅವತಾರಪುರುಷರು. ಅವರನ್ನು ಗುರುಗಳ ಗುರುಗಳು ಎನ್ನುತ್ತಾರೆ. ಮಾನವನ ಮೂಲಕ ಪ್ರಕಟವಾಗುವ ಭಗವಂತನ ಆವಿರ್ಭಾವವೇ ಅವರು. ಇಂಥ ಗುರುಗಳಾಗಲಿ ಅಥವಾ ಸಾಧಾರಣ ಗುರುಗಳಾಗಲಿ ಮಂತ್ರಗಳ ಮೂಲಕ ಶಿಷ್ಯರಿಗೆ ಉಪದೇಶ ಮಾಡುತ್ತಾರೆ. ಈ ಪ್ರಪಂಚವೇ ಭಗವಂತನ ರೂಪ. ಅಂಥ ವಿಶ್ವವ್ಯಾಪಿ ಭಗವಂತನನ್ನು ಸೂಚಿಸುವ ಒಂದೇ ಶಬ್ದವೆಂದರೆ, 'ಓಂ'. ಈ ಮಂತ್ರವು ಪ್ರಪಂಚವನ್ನೆಲ್ಲಾ ವ್ಯಾಪಿಸುವಂತಹ ಶಬ್ದಚಿಹ್ನೆ. ಹೀಗಾಗಿ ಓಂಕಾರವನ್ನು ಭಗವಂತನ ಚಿಹ್ನೆ ಎಂದು ಪರಿಗಣಿಸುತ್ತಾರೆ. ಓಂಕಾರವು ಅಖಂಡ ಬ್ರಹ್ಮನನ್ನು ಸೂಚಿಸುತ್ತದೆ. ಹಾಗೆಯೇ ಇತರೆ ಮಂತ್ರಗಳು ಕೂಡ ಬ್ರಹ್ಮದ ಬೇರೆ ಬೇರೆ ರೂಪಗಳನ್ನು ಸೂಚಿಸುತ್ತವೆ. ಇವೆಲ್ಲ ಭಗವಂತನ ಧ್ಯಾನಕ್ಕೆ ಮತ್ತು ಜ್ಞಾನ ಸಂಪಾದನೆಗೆ ಸಹಕಾರಿಗಳಾಗಿವೆ.

> **ಭಕ್ತಿ ಕರ್ಮಕ್ಕಿಂತ ಮೇಲು, ಯೋಗಕ್ಕಿಂತ ಮೇಲು. ಏಕೆಂದರೆ ಇವುಗಳೆಲ್ಲ ಮತ್ತಾವುದನ್ನೋ ಪಡೆಯುವುದಕ್ಕಾಗಿ ಇವೆ. ಆದರೆ ಭಕ್ತಿಗಾದರೋ ಅದೇ ಫಲ. ಭಕ್ತಿಯೇ ಗುರಿ. ಭಕ್ತಿಯೇ ದಾರಿ.**
> **– ಸ್ವಾಮಿ ವಿವೇಕಾನಂದ**

ಒಂದಲ್ಲ ಒಂದು ರೀತಿಯ ವಿಗ್ರಹಾರಾಧನೆಯನ್ನು ಪ್ರಪಂಚದಲ್ಲೆಲ್ಲಾ ನೋಡಬಹುದು. ಎಲ್ಲರಿಗೂ, ಹೊರಗೆ ಮತ್ತು ಮನಸ್ಸಿನ ಒಳಗೆ ಯಾವುದಾದರೂ ಒಂದು ಬಗೆಯ ಪ್ರತೀಕ ಬೇಕೇ ಬೇಕು. ಆದರೆ ದೇವರು ಬರೀ ಚಿತ್ರದಲ್ಲಿ ಇದ್ದಾನೆ ಎಂದು ಭಾವಿಸಬಾರದು. ದೇವರು ಚಿತ್ರದಲ್ಲಿ ಇದ್ದಾನೆ. ಆದರೆ ಚಿತ್ರವೇ ದೇವರು ಎನ್ನುವುದು ತಪ್ಪು. ಒಂದು ವಿಗ್ರಹವನ್ನು ಪ್ರತೀಕವಾಗಿ ಪೂಜಿಸಿದಾಗ ಅದನ್ನು ಪ್ರತಿಮಾಪೂಜೆ ಎನ್ನುತ್ತಾರೆ. ಪ್ರತಿಮೆ ಒಂದು ಬಗೆಯ ಪ್ರತೀಕವೇ ಸರಿ.

ಸ್ವಭಾವತಃ ನಮ್ಮಲ್ಲಿ ಪ್ರತಿಯೊಬ್ಬರೂ ಯಾವ ಆಧ್ಯಾತ್ಮಿಕ ಮಾರ್ಗಕ್ಕೆ ಅರ್ಹರಾಗಿರುತ್ತೇವೆಯೋ ಅದನ್ನೇ 'ಇಷ್ಟ' ಎಂದು ಕರೆಯುತ್ತೇವೆ. ಇಷ್ಟನಿಷ್ಠೆಯ ಸಿದ್ಧಾಂತವೆಂದರೆ, ಒಬ್ಬ ಮನುಷ್ಯನಿಗೆ ತನ್ನದೇ ಆದ ಧರ್ಮವನ್ನು ಹುಡುಕಿಕೊಳ್ಳುವ ಅವಕಾಶವನ್ನು ಕೊಡುವುದು. ಒಬ್ಬನು ತಾನು ಯಾವುದನ್ನು ಪೂಜಿಸುತ್ತಿರುವನೋ ಅದನ್ನೇ ಮತ್ತೊಬ್ಬನೂ ಪೂಜಿಸಬೇಕೆಂದು ಒತ್ತಾಯಮಾಡಬಾರದು. ಅಂಥ ಪ್ರಯತ್ನಗಳೆಲ್ಲ ವಿಫಲವಾಗುತ್ತವೆ.

## ಭಕ್ತಿಮಾರ್ಗ ಮತ್ತು ಸಾಧನೆ

"ಭಕ್ತಿಮಾರ್ಗವೆಂದರೆ ಸಹಜವಾಗಿ ಹೃತ್ಪೂರ್ವಕವಾಗಿ ಭಗವಂತನನ್ನು ಅರಸುವುದು" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಈ ಅನ್ವೇಷಣೆಯು ಪ್ರೇಮದಲ್ಲಿ ಪ್ರಾರಂಭವಾಗಿ, ಪ್ರೇಮದ ಮೂಲಕ ಸಾಗಿ, ಪ್ರೇಮದಲ್ಲಿ ಪರ್ಯವಸಾನವಾಗುತ್ತದೆ. ನಾರದರು ತಮ್ಮ ಭಕ್ತಿಸೂತ್ರಗಳಲ್ಲಿ ಇದನ್ನು ಹೀಗೆ ವಿವರಿಸುತ್ತಾರೆ: "ಭಕ್ತಿ ಎಂದರೆ ಈಶ್ವರನ ಮೇಲೆ ಇಡುವ ಪರಮಪ್ರೇಮ. ಅದು ದೊರೆತ ವ್ಯಕ್ತಿ ಎಲ್ಲವನ್ನೂ ಪ್ರೀತಿಸುವನು, ಯಾರನ್ನೂ ದ್ವೇಷಿಸುವುದಿಲ್ಲ. ಅಂಥವನು ನಿತ್ಯತೃಪ್ತನಾಗಿರುವನು." ಈ ಪ್ರೇಮವು ಲೌಕಿಕ ಕಾಮದಂತೆ ಅಲ್ಲ. ಲೌಕಿಕ ವಾಸನೆ ಇರುವವರೆಗೆ ಇಂಥ ಪರಮಪ್ರೇಮವು ಮಾನವನಿಗೆ ದೊರಕುವುದಿಲ್ಲ.

ಭಕ್ತಿಯಲ್ಲಿ ಇರುವ ಅನುಕೂಲವೆಂದರೆ ಅದು ಸಹಜವಾದ ಮಾರ್ಗ. ಆದರೆ ಅದರಲ್ಲಿ ಅನಾನುಕೂಲವೂ ಇದೆ ಎಂದು ಸ್ವಾಮೀಜಿ ಹೇಳುತ್ತಾರೆ. ಕೆಲವು ವೇಳೆ ಪ್ರಾರಂಭದ ಸ್ಥಿತಿಯಲ್ಲಿ ಭಕ್ತನು ಮತಭ್ರಾಂತಿಯುಳ್ಳವನಾಗುತ್ತಾನೆ.